ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ೨೭.೦೪.೨೦೧೩ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೭ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ೭ನೇ ಸಾಮಾನ್ಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಏಪ್ರಿಲ್ ೨೭, ೨೦೧೩ರ ಶನಿವಾರ ಬೆಳಗ್ಗೆ ೧೧.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ, ಉಮ್ಮಚಗಿ | ಸದಸ್ಯರು |
| ೩. | ಡಾ. ಬಿ.ಎಸ್. ಮಹದೇವಯ್ಯ, ಶಿವಮೊಗ್ಗ | ಸದಸ್ಯರು |
| ೪. | ವಿದ್ವಾನ್ ಚಂದ್ರಶೇಖರಯ್ಯ, ರಾಮನಗರ | ಸದಸ್ಯರು |
| ೫. | ಪ್ರೊ. ಬಿ. ಮಹಾದೇವನ್, ಬೆಂಗಳೂರು | ಸದಸ್ಯರು |
| ೬. | ಡಾ. ಪದ್ಮಾಶೇಖರ್, ಮೈಸೂರು | ಸದಸ್ಯರು |
| ೭. | ಡಾ. ಸಿ. ಪಾಲಯ್ಯ, ಚಿತ್ರದುರ್ಗ | ಸದಸ್ಯರು |
| ೮. | ವಿದ್ವಾನ್ ಶ್ರೀನಿವಾಸಮೂರ್ತಿ, ಮೈಸೂರು | ಸದಸ್ಯರು |
| ೯. | ಪ್ರೊ. ಸಿ. ನಂಜುಂಡಯ್ಯ, ಆದಿಚುಂಚನಗಿರಿ | ಸದಸ್ಯರು |
| ೧೦. | ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ, ತುಮಕೂರು | ಸದಸ್ಯರು |
| ೧೧. | ಡಾ. ಎಚ್.ಕೆ. ಸುರೇಶ್ ಆಚಾರ್ಯ, ಉಡುಪಿ | ಸದಸ್ಯರು |
| ೧೨. | ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ, ಹೊನ್ನಾವರ | ಸದಸ್ಯರು |
| ೧೩. | ಡಾ. ಶ್ರೀನಿವಾಸ ವರಖೇಡಿ, ಡೀನ್, ಭಾಷಾ ನಿಕಾಯ | ಸದಸ್ಯರು |
| ೧೪. | ಪ್ರೊ. ವೈ.ಎಸ್. ಸಿದ್ದೇಗೌಡ, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | ವಿದ್ವಾನ್ ಎ. ಹರಿದಾಸ ಭಟ್ಟ, ಬೆಂಗಳೂರು | ಸದಸ್ಯರು |
| ೭. | ಡಾ. ಭಗವಂತ ಲಕ್ಷ್ಮಣ ನಡೋಣಿ, ಧಾರವಾಡ | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1:** **ಪ್ರಶಿಕ್ಷಣ ಪರಿಷತ್ ಆರನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 09.11.2012ರಂದು ನಡೆದ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಆರನೇ ಸಭೆಯಲ್ಲಿ ಚರ್ಚಿತವಾದ **ವಿಷಯ ಸಂಖ್ಯೆ 2**ಕ್ಕೆ ಸಂಬಂಧಿಸಿದಂತೆ ಐವರು ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಡಿ.ಲಿಟ್ ಗೌರವ ಉಪಾಧಿಯನ್ನು ನೀಡಲಾಗಿದೆ. **ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ 2010–11ನೇ ಸಾಲಿನಲ್ಲಿ ನಡೆಸಿದ ಸಂಸ್ಕೃತ/ವೇದ ಸ್ನಾತಕ–ಸ್ನಾತಕೋತ್ತರ ಪ್ರಸಿದ್ಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ **174 ವಿದ್ಯಾರ್ಥಿಗಳಿಗೆ ಬಿ.ಎ. ವಿದ್ವನ್ಮಧ್ಯಮಾ** ಹಾಗೂ **136 ವಿದ್ಯಾರ್ಥಿಗಳಿಗೆ ಎಂ.ಎ. ವಿದ್ವದುತ್ತಮಾ** ಉಪಾಧಿಯನ್ನು ಪ್ರಥಮ ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ 2010–11ನೇ ಸಾಲಿನಲ್ಲಿ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟ ಶ್ರೇಣಿ ಪಡೆದು ಉತ್ತೀರ್ಣರಾದ ಹನ್ನೆರಡು ಮಂದಿ ವಿದ್ಯಾರ್ಥಿಗಳಿಗೆ ರೂ. 5000/– ನಗದು ಪುರಸ್ಕಾರ ಮತ್ತು ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರವನ್ನು ನೀಡಲಾಗಿದೆ.

ನಿರ್ಣಯ: ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದಿಸಿತು.

**ವಿಷಯ 2:** ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದೆ 25 ಮತ್ತು 30 ವರ್ಷಗಳು ಆದೇ ಹುದ್ದೆಯಲ್ಲಿ ಮುಂದುವರೆದಿರುವ ಗೋಕರ್ಣದ ಶ್ರೀ ಮೇಧಾದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜಿನ ಸಿಬ್ಬಂದಿಗೆ ಸರ್ಕಾರದ ಆದೇಶಾನುಸಾರ ಹೆಚ್ಚುವರಿ ವೇತನಬಡ್ತಿ ಮಂಜೂರು ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.

ಟಿಪ್ಪಣಿ: ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು ಗೋಕರ್ಣ, ಉತ್ತರಕನ್ನಡ ಜಿಲ್ಲೆ ಈ ಕಾಲೇಜಿನ ಕೆಳಕಂಡ ಶಿಕ್ಷಕರು ಯಾವುದೇ ಪದೋನ್ನತಿ ಪಡೆಯದೆ ಸತತವಾಗಿ ಒಂದೇ ಹುದ್ದೆಯಲ್ಲಿ 25 ಮತ್ತು 30 ವರ್ಷಗಳ ತೃಪ್ತಿಕರ ಸೇವೆ ಸಲ್ಲಿಸಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 12 ಎಸ್.ಆರ್.ಪಿ 2012 (VIII) ಬೆಂಗಳೂರು, ದಿನಾಂಕ: 14.06.2012, ಹಾಗೂ ಸರ್ಕಾರದ ಆದೇಶ ಸಂಖ್ಯೆ ಇಡಿ 100 ಎಸ್‌ಟಿಬಿ 2012, ದಿನಾಂಕ 11.09.2012ರ ಸರ್ಕಾರದ ಆದೇಶಗಳಲ್ಲಿ ಒಂದೇ ಹುದ್ದೆಯಲ್ಲಿ ಯಾವುದೇ ಪದೋನ್ನತಿ ಪಡೆಯದೆ 25 ಮತ್ತು 30 ವರ್ಷಗಳ ಕಾಲ ಮುಂದುವರೆದಿರುವ ಅಥವಾ ಮುಂದುವರೆಯುವ ನೌಕರರಿಗೆ ಆ ಹುದ್ದೆಗೆ ನಿಗದಿಪಡಿಸಿರುವ ವೇತನ ಶ್ರೇಣಿಯಲ್ಲಿ 2 ಮತ್ತು 3ನೇ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಿರುವ ಹಿನ್ನೆಲೆಯಲ್ಲಿ ವೇತನ ನಿಗದಿಗೊಳಿಸಿ ಆದೇಶಿಸಿದೆ. ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

| ಕ್ರ. ಸಂ | ಶಿಕ್ಷಕರ ಹೆಸರು ಮತ್ತು ಹುದ್ದೆ | ವೇತನ ಸಹಿತ ಅನುಮೋದನೆ ಗೊಂಡ ದಿನಾಂಕ | 25 ಮತ್ತು 30 ವರ್ಷಗಳ ಸೇವೆ ಪೂರ್ಣಗೊಂಡ ದಿನಾಂಕ | 2 ಮತ್ತು 3ನೇ ಹೆಚ್ಚುವರಿ ವೇತನಬಡ್ತಿಯ ಅರ್ಹತಾ ದಿನಾಂಕ | 01.04.2012ರಲ್ಲಿ ಪಡೆಯುತ್ತಿದ್ದ ವೇತನ ಮತ್ತು ವೇತನಶ್ರೇಣಿ | 2ನೇ ಹೆಚ್ಚುವರಿ ವೇತನ ಬಡ್ತಿಯಲ್ಲಿ ನಿಗದಿಗೊಳಿಸಿದ ವೇತನ/ ವೇತನಶ್ರೇಣಿ | 3ನೇ ಹೆಚ್ಚುವರಿ ವೇತನ ಬಡ್ತಿಯಲ್ಲಿ ನಿಗದಿಗೊಳಿಸಿದ ವೇತನ/ವೇತನಶ್ರೇಣಿ |
|---|---|---|---|---|---|---|---|
| 1 | ವಿದ್ವಾನ್ ಕೆ ಸತ್ಯನಾರಾಯಣ ಪ್ರಭಾರಿ ಪ್ರಾಂಶುಪಾಲರು | 21.08.1981 | 21.08.2006<br>21.08.2011 | **01.04.2012** | 32000+3400<br>17650–32000 | 32000+4200<br>17650–32000 | 32000+5000<br>17650–32000 |
| 2 | ಶಾರದಾ ಗ ಹಿರೇಗಂಗೆ ಸಹಾಯಕ ಪ್ರಾಧ್ಯಾಪಕರು | 24.06.1985 | 24.06.2010<br>24.06.2015 | **01.04.2012** | 29600+2400<br>16000–29600 | 29600+3200<br>16000–29600 | ----- |
| 3 | ವಿದುಷಿ ನಿರ್ಮಲಾ ಕೃ ಹಿರೇ ಸಹಾಯಕ ಶಿಕ್ಷಕರು | 13.02.1984 | 13.02.2009 | **01.04.2012** | 22800<br>14550–26700 | 23500<br>14550–26700 | ----- |
| 4 | ಶ್ರೀ ವಿ ವಿ ಕಾಮೇಶ್ವರ ದ್ವಿತೀಯ ದರ್ಜೆ ಸಹಾಯಕರು | 01.04.1982 | 01.04.2007<br>01.04.2012 | **01.04.2012** | 25300<br>14550–26700 | 26000<br>14550–26700 | 26700<br>14550–26700 |
| 5 | ಶ್ರೀ ಸುಬ್ರಾಯ ವಿ ಮೊಗೇರ | 21.08.1981 | 21.08.2006<br>21.08.2011 | **01.04.2012** | 17200<br>11000–19000 | 17650<br>11000–19000 | 18100<br>11000–19000 |
| 6 | ಶ್ರೀ ಮಹಾಬಲೇಶ್ವರ ಜಿ. ಗೌಡ ಸೇವಕ ಸಹಿತ ಕಾವಲುಗಾರರು | 17.01.1985 | 17.01.2010 | **01.04.2012** | 16800<br>11000–19000 | 17200<br>11000–19000 | ----- |

ನಿರ್ಣಯ: ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಘಟನೋತ್ತರ ಅನುಮೋದನೆಯನ್ನು ನೀಡಿತು.

**ವಿಷಯ 3:** ಡಾ. ಎನ್. ಲಕ್ಷ್ಮೀನಾರಾಯಣ ಭಟ್, ಪ್ರಾಧ್ಯಾಪಕರು, ಅಲಂಕಾರಶಾಸ್ತ್ರ, ಶ್ರೀಮನ್ಮಧ್ವಸಿದ್ಧಾಂತಪ್ರಭೋಧಿನಿ ಸಂಸ್ಕೃತ ಕಾಲೇಜು, ಉಡುಪಿ –ಇವರಿಗೆ 3ನೇ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.

ಟಿಪ್ಪಣಿ: ಡಾ. ಎನ್. ಲಕ್ಷ್ಮೀನಾರಾಯಣ ಭಟ್, ಪ್ರಾಧ್ಯಾಪಕರು, ಅಲಂಕಾರಶಾಸ್ತ್ರ, ಶ್ರೀಮನ್ಮಧ್ವಸಿದ್ಧಾಂತಪ್ರಭೋಧಿನಿ ಸಂಸ್ಕೃತ ಕಾಲೇಜು, ಉಡುಪಿ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ/153 ಎಸ್.ಟಿ.ಬಿ. 98 ಬೆಂಗಳೂರು ದಿನಾಂಕ: 02.12.1998ರ ಅನ್ವಯ 3ನೇ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡಲಾಗಿದೆ. ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ | ಪ್ರಸಕ್ತ ವೇತನ ಮತ್ತು ವೇತನ ಶ್ರೇಣಿ | 3ನೇ ಸ್ಥಗಿತ ವೇತನ ಬಡ್ತಿ ನಂತರದ ವೇತನ ನಿಗದಿ | ಜಾರಿಗೆ ಬರುವ ದಿನಾಂಕ |
|---|---|---|---|---|
| 01 | ಡಾ. ಎನ್. ಲಕ್ಷ್ಮೀನಾರಾಯಣ ಭಟ್, ಪ್ರಾಧ್ಯಾಪಕರು, ಅಲಂಕಾರ ಶಾಸ್ತ್ರ | 50100+1200+1200/<br>28100–50100 | 50100+1200+1200+1200/<br>28100–50100 | 1.11.2012 |

ನಿರ್ಣಯ: ಸಭೆಯು ಎಲ್ಲ ವಿವರಗಳನ್ನು ಪರಿಶೀಲಿಸಿ ಘಟನೋತ್ತರ ಅನುಮೋದನೆಯನ್ನು ನೀಡಿತು.

**ವಿಷಯ 4: ಸಂಶೋಧನ ಕೇಂದ್ರಗಳಿಗೆ ಮಾನ್ಯತೆ ನೀಡಿರುವ ಬಗೆಗೆ ಘಟನೋತ್ತರ ಅನುಮೋದನೆಯ ಕುರಿತು.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ–2009; ಪರಿಚ್ಛೇದ 47ರ ಅಡಿಯಲ್ಲಿ ಸಂಶೋಧನ ಕೇಂದ್ರ ಮಾನ್ಯತಾ ಪರಿನಿಯಮ–2012ರನ್ನು ರಚಿಸಿದ್ದು, ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರ ಮಾನ್ಯತಾ ಪರಿಶೀಲನಾ ಸಮಿತಿಯು ದಿನಾಂಕ 06.02.2013ರಂದು **ಉಡುಪಿಯ ಶ್ರೀ ವಾದಿರಾಜ ಸಂಶೋಧನ ಪ್ರತಿಷ್ಠಾನ,** ದಿನಾಂಕ 08.04.2013ರಂದು **ಬೆಂಗಳೂರಿನ ಪೂರ್ಣಪ್ರಜ್ಞ ಸಂಶೋಧನ ಮಂದಿರ** ಹಾಗೂ **ಸಂಸ್ಕೃತ ಭಾರತಿ** ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಮಾನ್ಯತೆ ನೀಡಲು ಶಿಫಾರಸ್ಸು ಮಾಡಿರುತ್ತದೆ. ಅದರಂತೆ, ಈ ಸಂಸ್ಥೆಗಳಿಗೆ ವಿಶ್ವವಿದ್ಯಾಲಯವು **ಸಂಶೋಧನ ಕೇಂದ್ರವೆಂಬ** ಮಾನ್ಯತೆ ನೀಡಿದೆ. ಈ ಸಂಸ್ಥೆಗಳು ಉತ್ತಮ ಗ್ರಂಥಾಲಯ, ನುರಿತ ಸಂಶೋಧಕರು, ಹಾಗೂ ಸಂಶೋಧನಕ್ಕೆ ಅವಶ್ಯವಾದ ಮೂಲಭೂತ ಸೌಲಭ್ಯವನ್ನು ಹೊಂದಿರುವ ಕಾರಣ ಮಾನ್ಯತೆ ಪಡೆದಿವೆ. ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹಲವಾರು ವಿದ್ವದ್‌ಸಂಸ್ಥೆಗಳಿಗೆ ಯುಕ್ತರೀತಿಯಿಂದ ಮಾನ್ಯತೆ ನೀಡುತ್ತಿರುವ ಬಗ್ಗೆ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿತು. ಮಾನ್ಯತೆ ಪಡೆದಿರುವ ಮೂರು ಸಂಸ್ಥೆಗಳ ಕಾರ್ಯವೈಖರಿ, ಸಂಶೋಧನಾಪ್ರಜ್ಞೆ, ಉತ್ತಮ ಆಡಳಿತ – ಇವುಗಳನ್ನು ಸಭೆಯು ಮನಗಂಡು ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 5: ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭವನ್ನು ಏರ್ಪಡಿಸಿ ಗೌರವ ಡಿ.ಲಿಟ್ ಪ್ರದಾನ ಹಾಗೂ 2011–12ನೇ ಸಾಲಿನಲ್ಲಿ ನಡೆದ ಸ್ನಾತಕ–ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಿ.ಎ. ವಿದ್ವನ್ಮಧ್ಯಮಾ ಹಾಗೂ ಎಂ.ಎ. ವಿದ್ವದುತ್ತಮಾ ಉಪಾಧಿಗಳನ್ನು ಪ್ರದಾನ ಮಾಡುವುದರ ಬಗೆಗೆ.**

ಟಿಪ್ಪಣಿ: 2011–12ನೇ ಸಾಲಿನ ವಿದ್ವತ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರವನ್ನು ವಿತರಿಸಿ ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭವನ್ನು ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಜೂನ್ ಮೊದಲ ಅಥವಾ ಎರಡನೇ ವಾರದಲ್ಲಿ ನಡೆಸಬೇಕಾಗಿದೆ.

1. **ಪಂಡಿತ್ ಬಾಲಚಂದ್ರಶಾಸ್ತ್ರೀ ನಾಗೇಶಶಾಸ್ತ್ರೀ ಉಪ್ಪಿನ ಬೆಟಗೇರಿ ಜೋಶಿ, ಧಾರವಾಡ ಜಿಲ್ಲೆ (ನವೀನನ್ಯಾಯ)**
2. **ವಿದ್ವಾನ್ ಕೆ.ಎಸ್. ವರದಾಚಾರ್ಯ, ಮೈಸೂರು ಜಿಲ್ಲೆ (ವಿಶಿಷ್ಟಾದ್ವೈತವೇದಾಂತ)**
3. **ವಿದ್ವಾನ್ ಕೆ. ನಾರಾಯಣಶಾಸ್ತ್ರಿ ಬುಚ್ಚನ್, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ (ವೇದ, ಮೀಮಾಂಸಾ ಶಾಸ್ತ್ರ)**
4. **ಡಾ. ಎಂ. ಶಿವಕುಮಾರಸ್ವಾಮಿ, ಬೆಂಗಳೂರು ಜಿಲ್ಲೆ (ಶಕ್ತಿವಿಶಿಷ್ಟಾದ್ವೈತವೇದಾಂತ)**

ಈ ಹಿರಿಯ ವಿದ್ವಾಂಸರಿಗೆ ಗೌರವ ಡಿ.ಲಿಟ್ ಪ್ರದಾನ ಮಾಡಬೇಕಿದೆ.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2011–12ನೇ ಸಾಲಿನಲ್ಲಿ ನಡೆಸಿದ ಸಂಸ್ಕೃತ/ವೇದ ಸ್ನಾತಕ–ಸ್ನಾತಕೋತ್ತರ ಪ್ರಸಿದ್ಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ **238 ವಿದ್ಯಾರ್ಥಿಗಳಿಗೆ** ಬಿ.ಎ. ವಿದ್ವನ್ಮಧ್ಯಮಾ ಹಾಗೂ **158 ವಿದ್ಯಾರ್ಥಿಗಳಿಗೆ** ಎಂ.ಎ. ವಿದ್ವದುತ್ತಮಾ ಉಪಾಧಿಯನ್ನು ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗುತ್ತಿದೆ.

ನಿರ್ಣಯ: **ಸಭೆಯು ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭದ ಎಲ್ಲಾ ಪೂರ್ವಕಲಾಪಗಳಿಗೆ ತನ್ನ ಅನುಮೋದನೆಯನ್ನು ನೀಡಿ ಮೆಚ್ಚುಗೆಯನ್ನು ಸೂಚಿಸಿತು. ಕರ್ನಾಟಕದ ನಾಲ್ವರು ಹಿರಿಯ ಪರಿಣತ ವಿದ್ವಾಂಸರಿಗೆ ಗೌರವ ಡಿ.ಲಿಟ್ ಪ್ರದಾನ ಮಾಡುತ್ತಿರುವುದನ್ನು ತಿಳಿದು ಸಭೆಯು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿತು.**

**ವಿಷಯ 6: ಆಯಾ ಶಾಸ್ತ್ರಭಾಗಗಳಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರ ನೀಡುವ ಬಗೆಗೆ.**

ಟಿಪ್ಪಣಿ: 2011–12ನೇ ಸಾಲಿನಲ್ಲಿ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟಶ್ರೇಣಿ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ. 5000/– ನಗದು ಪುರಸ್ಕಾರ ಮತ್ತು ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರವನ್ನು ನೀಡಬೇಕಾಗಿದೆ. ಅನುಮೋದನೆ ಬಗೆಗೆ.

ನಿರ್ಣಯ: **ಸಭೆಯು ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರ ನೀಡಲು ಅನುಮೋದನೆ ನೀಡಿತು.**

**ವಿಷಯ 7: ವಿಶ್ವವಿದ್ಯಾಲಯದ ಅಧೀನವಾಗಿ ಸಂಜೆ ಕಾಲೇಜಿನ ಆರಂಭಕ್ಕೆ ಪ್ರಸ್ತಾವನೆ.**

ಟಿಪ್ಪಣಿ: ಸಂಸ್ಕೃತವನ್ನು ಭಾಷೆಯನ್ನಾಗಿ ಅಲ್ಲದೇ ಪಾರಂಪರಿಕ ಸಂಸ್ಕೃತ ಶಾಸ್ತ್ರಾಭ್ಯಾಸ ಮಾಡಬಯಸುವ ಜಿಜ್ಞಾಸುಗಳಿಗೆ ಮತ್ತು ಸಂಶೋಧಕರಿಗೆ ಅಧ್ಯಯನ ಅವಕಾಶಗಳನ್ನು ಕಲ್ಪಿಸುವುದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶಗಳಲ್ಲಿ ಒಂದು. ಈಗಾಗಲೇ ಅನುದಾನ ಸಹಿತವಾಗಿ ಸಂಯೋಜನೆಗೊಂಡ ಸಂಸ್ಕೃತ ಕಾಲೇಜುಗಳಲ್ಲದೇ 10 ಹೊಸ ಅನುದಾನರಹಿತ ಕಾಲೇಜುಗಳು ಕಾರ್ಯಾರಂಭ ಮಾಡಿವೆ. ರಾಜ್ಯಾದ್ಯಾಂತ ಸಂಸ್ಕೃತ ಶಾಸ್ತ್ರಾಧ್ಯಯನಕ್ಕಾಗಿ ಹೊಸ ವಾತಾವರಣ ಮೂಡಿಸುವ ಹಿನ್ನೆಲೆಯಲ್ಲಿ ಈ ವಿಸ್ತರಣಾ ಕಾರ್ಯವನ್ನು ಕೈಗೊಳ್ಳಲಾಗಿದೆ. ಪ್ರಸಕ್ತ ಬೆಂಗಳೂರು ಮತ್ತು ಮೈಸೂರು ಈ ಎರಡು ಮಹಾನಗರಗಳಲ್ಲಿ ನಡೆಯುತ್ತಿದ್ದ ಸರಕಾರಿ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ವಿಲೀನಗೊಳಿಸಲಾಗಿದೆ. (ಈ ಕಾಲೇಜುಗಳ ಬೋಧಕ–ಬೋಧಕೇತರ ಸಿಬ್ಬಂದಿಗಳ ಸೇವಾ ವಿಲೀನೀಕರಣಕ್ಕೆ ಸಂಬಂಧಿಸಿದ ವಿಷಯವು ಈಗ ಸರಕಾರದ ಪರಿಶೀಲನೆಯಲ್ಲಿದೆ.) ವಿಶ್ವವಿದ್ಯಾಲಯವು ಸದ್ಯಕ್ಕೆ ಬೆಂಗಳೂರು ನಗರದ ಸಂಸ್ಕೃತ ಕಾಲೇಜಿನ ಆವರಣವನ್ನು

ಬಳಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ಐ.ಟಿ.–ಬಿ.ಟಿ. ಹಾಗೂ ಇನ್ನಿತರ ಅನೇಕ ಕ್ಷೇತ್ರಗಳಲ್ಲಿ ಉದ್ಯೋಗ ಮಾಡುತ್ತಿರುವವರಲ್ಲಿ ಸಂಸ್ಕೃತ ಹಾಗೂ ಶಾಸ್ತ್ರಾಧ್ಯಯನದ ಬಗೆಗೆ ಸಾಕಷ್ಟು ಆಸಕ್ತಿ ಇದ್ದು ಅವರಿಗೆ ಅವಕಾಶ ಕಲ್ಪಿಸಿಕೊಡಬೇಕೆಂಬ ಬೇಡಿಕೆಗಳು ವಿಶ್ವವಿದ್ಯಾಲಯದ ಮುಂದೆ ಇವೆ. ಬೆಂಗಳೂರು ನಗರದ ಅನೇಕ ಬಡಾವಣೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಸಂಸ್ಕೃತವನ್ನು ಪಾಠ ಮಾಡುತ್ತಿರುವ ಅನೇಕ ಅಧ್ಯಾಪಕರಿಗೆ ಉನ್ನತ ವಿದ್ಯಾಭ್ಯಾಸದಲ್ಲಿ ಅಭಿಲಾಷೆ ಇದ್ದರೂ ಅವಕಾಶಗಳು ದೊರಕುವುದಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಆಧ್ಯಾಯ2ರ ಪರಿಚ್ಛೇದ4 (4) ಮತ್ತು ಆಧ್ಯಾಯ4ರ ಪರಿಚ್ಛೇದ25(7)ರ ಪ್ರಶಿಕ್ಷಣ ಪರಿಷತ್ತಿಗೆ ದತ್ತವಾದ ಅಧಿಕಾರದ ಅಡಿಯಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಒಂದು ಸಂಧ್ಯಾಕಾಲದ ಸಂಸ್ಕೃತ ಅಧ್ಯಯನ ಕೇಂದ್ರವನ್ನು (ಸಂಸ್ಕೃತ ಕಾಲೇಜು) ಆರಂಭಿಸಬೇಕೆಂಬ ಪ್ರಸ್ತಾವನೆಯನ್ನು ರೂಪಿಸಲಾಗಿದೆ. ಈ ಸಂಜೆ ಕಾಲೇಜು ಸಾಯಂಕಾಲ 4 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಕಾರ್ಯನಿರ್ವಹಿಸಿದಲ್ಲಿ ಉದ್ಯೋಗಿಗಳು, ಮಹಿಳೆಯರು, ಸ್ವಯಂ ಉದ್ಯೋಗಿಗಳು, ನಿವೃತ್ತರು ಈ ಅಧ್ಯಯನ ಕೇಂದ್ರದ ಲಾಭವನ್ನು ಪಡೆಯುತ್ತಾರೆ. ಈಗಿರುವ ಸಂಸ್ಕೃತ ಕಾಲೇಜಿನಲ್ಲಿಯೇ ಸಂಜೆ ಕಾಲೇಜನ್ನು ನಡೆಸಲು ಸ್ಥಳಾವಕಾಶ ಮಾಡಿಕೊಳ್ಳಬಹುದಾಗಿದೆ ಹಾಗೂ ವಿ.ವಿ. ಮತ್ತು ಕಾಲೇಜಿನಲ್ಲಿರುವ ಅಧ್ಯಾಪಕರ ಸೇವೆಯನ್ನು ಪಡೆದು ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ವಿಶ್ವವಿದ್ಯಾಲಯದ ಸಂಜೆ ಕಾಲೇಜನ್ನು ನಡೆಸಬಹುದಾಗಿದೆ.

ನಿರ್ಣಯ: **ಸಂಸ್ಕೃತ ಸಂಜೆ ಕಾಲೇಜನ್ನು ಪ್ರಾರಂಭಿಸುವ ಬಗೆಗೆ ಸಭೆಯು ಸುದೀರ್ಘವಾಗಿ ಚರ್ಚಿಸಿತು. ಭಾರತದಾದ್ಯಂತ ಎಲ್ಲೂ ಸಂಸ್ಕೃತ ಸಂಜೆ ಕಾಲೇಜು ಇಲ್ಲದಿರುವುದನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಆದರೆ, ಈ ಸಂಬಂಧವಾಗಿ ಸಾರ್ವಜನಿಕರಿಂದ ಬೇಡಿಕೆ ಇರುವುದನ್ನು ಗಮನಿಸಿ, ಉತ್ತಮ ರೀತಿಯಲ್ಲಿ ೨೦೧೩–೧೪ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಬಹುದೆಂದೂ ಈ ವಿಷಯವಾಗಿ ಪ್ರಶಾಸನ ಸಮಿತಿಯ ಸಭೆಯಲ್ಲಿಟ್ಟು ಚರ್ಚಿಸಿ ವಿಷಯವನ್ನು ಅಂತಿಮಗೊಳಿಸಬಹುದೆಂದೂ ಸಭೆಯು ಸೂಚಿಸಿತು.**

**ವಿಷಯ 8: 2012–13ನೇ ಸಾಲಿನಿಂದ ವೀರಶೈವ ವೇದ ವಿದ್ವನ್ಮಧ್ಯಮಾ (ಬಿ.ಎ.) ಮತ್ತು ವಿದ್ವದುತ್ತಮಾ (ಎಮ್.ಎ.) ತರಗತಿಗಳನ್ನು ಪ್ರಾರಂಭಿಸಿ ಪರೀಕ್ಷೆ ನಡೆಸುವ ಬಗೆಗೆ.**

ಟಿಪ್ಪಣಿ: ಭಾರತೀಯ ಧರ್ಮಗಳಲ್ಲಿ ವೀರಶೈವ ಧರ್ಮವೂ ಒಂದು. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳಿಗೆ ವಿದ್ವತ್ ತರಗತಿಗಳು ಮತ್ತು ಪರೀಕ್ಷೆಗಳು ನಡೆಯುತ್ತಿವೆ. ಆದರೆ ವೀರಶೈವ ವೇದದಲ್ಲಿ ಕೇವಲ ವೇದಮೂಲ ಪರೀಕ್ಷೆ ಮಾತ್ರ ನಡೆಯುತ್ತಿದ್ದು, ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ತರಗತಿಗಳು ಮತ್ತು ಪರೀಕ್ಷೆಗಳು ನಡೆಯುತ್ತಿಲ್ಲ. ಆದ್ದರಿಂದ ಹೊಸದಾಗಿ ಸಂಸ್ಕೃತ ವಿಶ್ವವಿದ್ಯಾಲಯವೇ ಸ್ಥಾಪನೆಯಾಗಿದ್ದರಿಂದ 2013–14ನೇ ಸಾಲಿನಿಂದ ವೀರಶೈವವೇದ ವಿದ್ವತ್ ತರಗತಿಗಳನ್ನು ಪ್ರಾರಂಭಿಸಿ ಪರೀಕ್ಷೆಗಳನ್ನು ನಡೆಸಿ ಅವಕಾಶವಂಚಿತ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕೆಂದು ಪ್ರಶಾಸನ ಸಮಿತಿ ಸದಸ್ಯರಾದ ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಪ್ರಸ್ತಾಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಅಧ್ಯಾಯ4ರ ಪರಿಚ್ಛೇದ 25(12) ಮತ್ತು (23)ರ ಪ್ರಶಿಕ್ಷಣ ಪರಿಷತ್ತಿಗೆ ದತ್ತವಾದ ಅಧಿಕಾರದ ಅಡಿಯಲ್ಲಿ ವೀರಶೈವ ವೇದದ ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ತರಗತಿಗಳ ಪಠ್ಯಕ್ರಮ ಮತ್ತು ಪರೀಕ್ಷಾಕ್ರಮದ ವಿವರಗಳನ್ನು ಕಳುಹಿಸಿದ್ದು, ಈ ಬಗ್ಗೆ ಚರ್ಚಿಸಿ ಅಧ್ಯಯನ ಮಂಡಳಿ ರಚಿಸಿ, ತರಗತಿ ಆರಂಭಿಸುವ ಬಗೆಗೆ ಸೂಕ್ತ ನಿರ್ಣಯ ಕೈಗೊಳ್ಳಬೇಕಾಗಿದೆ.

ನಿರ್ಣಯ: **ಸಭೆಯು ಈ ವಿಷಯದ ಬಗೆಗೆ ಪೂರ್ವಾಪರ ಸಾಧಕ–ಬಾಧಕಗಳನ್ನು ಚರ್ಚಿಸಿತು. ಈ ಸಂಬಂಧವಾಗಿ ಈ ಕೆಳಕಂಡ ಮಹನೀಯರನ್ನು ಆಹ್ವಾನಿಸಿ ಅಧ್ಯಯನ ಮಂಡಳಿ ರಚಿಸಿ ಯುಕ್ತಕ್ರಮ ವಹಿಸಬಹುದೆಂದು ಸಭೆಯು ಸೂಚಿಸಿ ಅನುಮೋದಿಸಿತು.**

**೧. ಡಾ. ಎಂ. ಶಿವಕುಮಾರಸ್ವಾಮಿ, ಬೆಂಗಳೂರು**
**೨. ವಿದ್ವಾನ್ ಎಂ. ರಾಜಶೇಖರಯ್ಯ, ಮೈಸೂರು**
**೩. ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ, ತುಮಕೂರು**
**೪. ನಿರ್ದೇಶಕರು, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು**

**ವಿಷಯ 9: ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು –ಇವರ ಮೂಲಾಂತ/ಸಂಹಿತಾ ವೇದ ಪರೀಕ್ಷೆಯನ್ನು ವೇದಮೂಲ ಶಿಕ್ಷಣಕ್ಕೆ ಸಮಾನವೆಂದು ಪರಿಗಣಿಸಿ ಬಿ.ಎ. ವೇದ ವಿದ್ವನ್ಮಧ್ಯಮಾ ತರಗತಿಗೆ ಪ್ರವೇಶಾವಕಾಶ ನೀಡುವ ಬಗೆಗೆ.**

ಟಿಪ್ಪಣಿ: ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮವು ಪವಿತ್ರ ಧಾರ್ಮಿಕ ಸಂಸ್ಥೆಯಾಗಿದೆ. ಇದು ವೇದ ಶಾಸ್ತ್ರಗಳ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಯುವ ವಟುಗಳಿಗೆ ಉಚಿತವಾಗಿ ಪಾರಂಪರಿಕ ಕ್ರಮದಲ್ಲಿ ವೈದಿಕ ಶಿಕ್ಷಣ ನೀಡಿ ವೈದಿಕ ವಿದ್ಯೆಯು ಸಮಾಜದಲ್ಲಿ ಪಸರಿಸಲು ಶ್ರಮಿಸುತ್ತಿದೆ. ಅದಕ್ಕಾಗಿ 5 ವರ್ಷಗಳ ಮೂಲಭೂತ ತರಗತಿ ಮತ್ತು 7 ವರ್ಷಗಳ ಮೂಲಾಂತಮ್/ಸಂಹಿತಾ ತರಗತಿಗಳನ್ನು ನಡೆಸಿ ಪ್ರಸಿದ್ಧ ವೇದ ವಿದ್ವಾಂಸರಿಂದ ಪರೀಕ್ಷೆ ನಡೆಸಿ ಪ್ರಮಾಣಪತ್ರ ನೀಡುತ್ತಾ ಬಂದಿದ್ದು, ಈ ಪರೀಕ್ಷೆಗಳನ್ನು ಆಂಧ್ರ ಪ್ರದೇಶ ಸರ್ಕಾರ ಮತ್ತು ಶ್ರೀ ವೆಂಕಟೇಶ್ವರ ವೈದಿಕ ವಿಶ್ವವಿದ್ಯಾಲಯಗಳು ಪದವಿಪೂರ್ವ ಶಿಕ್ಷಣಕ್ಕೆ ಸಮಾನವೆಂದು ಪರಿಗಣಿಸಿ

ಆದೇಶ ಹೊರಡಿಸಿವೆ. ಸಂಸ್ಕೃತ ವಿಶ್ವವಿದ್ಯಾಲಯವೂ ಸಹ ಈ ಪರೀಕ್ಷೆಗಳನ್ನು ವೇದ ವಿದ್ವನ್ಮಧ್ಯಮಾ ತರಗತಿ ಪ್ರವೇಶಕ್ಕೆ ಅರ್ಹತಾ ಪರೀಕ್ಷೆಯೆಂದು ಪರಿಗಣಿಸಿ ಪಾರಂಪರಿಕವಾಗಿ ಶ್ರದ್ಧೆಯಿಂದ ವೇದಾಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಉನ್ನತ ವೇದಾಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ಅವಧೂತ ದತ್ತಪೀಠದ ಆಡಳಿತಾಧಿಕಾರಿಗಳು ಕೋರಿರುತ್ತಾರೆ. ಈ ಬಗೆಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿದೆ.

ನಿರ್ಣಯ: **ಸಭೆಯು ವಿಷಯಗಳನ್ನು ಸಮಗ್ರವಾಗಿ ಪರಿಶೀಲಿಸಿ ವೇದಮೂಲ ಶಿಕ್ಷಣಕ್ಕೆ ಸಮಾನಾಂತರವೆಂದು ಪರಿಗಣಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 10: ವಿವಿಧ ಪಾಠಶಾಲೆ ಮತ್ತು ಸಂಸ್ಥೆಗಳು ನಡೆಸುವ ವೇದ ಪರೀಕ್ಷೆಗಳನ್ನು ವೇದಮೂಲ ಶಿಕ್ಷಣಕ್ಕೆ ಸಮವೆಂದು ಪರಿಗಣಿಸಿ ವೇದ ವಿದ್ವನ್ಮಧ್ಯಮಕ್ಕೆ ಪ್ರವೇಶಾವಕಾಶ ನೀಡುವ ಬಗೆಗೆ.**

ಟಿಪ್ಪಣಿ: ವೈದಿಕ ಶಿಕ್ಷಣವು ಶ್ರವಣ ಪರಂಪರೆಯಿಂದ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಗುರುಮುಖ ಅಧ್ಯಯನದಿಂದ ಮಾತ್ರ ಕರಗತವಾಗುವ ವೇದವಿದ್ಯೆಗೆ ವಾಚಾ ಪರೀಕ್ಷೆಯೇ ಪ್ರಧಾನವಾದದ್ದು. ಅನೇಕ ಪ್ರಾಂತಗಳಲ್ಲಿ ವಿವಿಧ ಸಂಸ್ಥೆಗಳು, ಪಾಠಶಾಲೆಗಳು ಮತ್ತು ಮಠಮಾನ್ಯಗಳು ಪಾರಂಪರಿಕವಾಗಿ ವೈದಿಕ ಶಿಕ್ಷಣವನ್ನು ನೀಡುತ್ತಾ ಬಂದಿದ್ದು ವಿಶಿಷ್ಟ ಪರೀಕ್ಷಾಕ್ರಮವನ್ನೂ ಸಹ ಅಳವಡಿಸಿಕೊಂಡಿವೆ. ಆದ್ದರಿಂದ ವೇದ ವಿಭಾಗದಲ್ಲಿ ಬೇರೆ ಬೇರೆ ಪರೀಕ್ಷೆಗಳಿದ್ದು ಅವುಗಳಿಗೆ ಮಾನ್ಯತೆ ನೀಡಿ ವೇದಾಧ್ಯಯನವನ್ನು ಬೆಳೆಸಬೇಕಿದೆ.ಈ ಹಿನ್ನೆಲೆಯಲ್ಲಿ ರಾಜ್ಯದ ಹಾಗೂ ನೆರೆ ರಾಜ್ಯದ 48 ಪಾಠಶಾಲೆಗಳ/ಸಂಸ್ಥೆಗಳ ಪಟ್ಟಿ ಲಗತ್ತಿಸಿದ್ದು ಈ ಪಾಠಶಾಲೆಗಳ ವೇದ ಪರೀಕ್ಷೆಯನ್ನು ವೇದ ವಿದ್ವನ್ಮಧ್ಯಮಾ ತರಗತಿ ಪ್ರವೇಶಕ್ಕೆ ಅರ್ಹತಾ ಪರೀಕ್ಷೆಯಾಗಿ ಪರಿಗಣಿಸಬಹುದಾಗಿದೆ. ಟಿ.ಟಿ.ಡಿ. ಕಾರ್ಯಕಾರಿ ಮಂಡಳಿಯೂ ಸಹ ಈ ಶಾಲೆಗಳ ಪರೀಕ್ಷೆಗೆ ಮಾನ್ಯತೆ ನೀಡಿದೆ ಎಂಬುದನ್ನು ಗಮನಿಸಬಹುದು. ಈ ಬಗೆಗೆ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿದೆ.

ನಿರ್ಣಯ: **ಸಭೆಯು ವಿಷಯವನ್ನು ಸೂಕ್ಷ್ಮವಾಗಿ ಚರ್ಚಿಸಿ ವೇದ ವಿದ್ವನ್ಮಧ್ಯಮಾಕ್ಕೆ ಪ್ರವೇಶಾವಕಾಶ ನೀಡಬಹುದೆಂದು ಅನುಮೋದನೆಯನ್ನು ನೀಡಿತು.**

**ವಿಷಯ 11: 2013–14ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಂಸ್ಕೃತ ಪ್ರಥಮಾ ತರಗತಿಗಳಿಗೆ ನೂತನ ಪರಿಷ್ಕೃತ ಪಠ್ಯಕ್ರಮಗಳ ಅನುಷ್ಠಾನಕ್ಕಾಗಿ ಅನುಮೋದಿಸುವ ಬಗೆಗೆ**

ಟಿಪ್ಪಣಿ: ದಿನಾಂಕ 17.10.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 5ನೆಯ ಸಭೆಯಲ್ಲಿ ಚರ್ಚಿತವಾದ ಸಂಸ್ಕೃತ ಪ್ರಥಮಾ ತರಗತಿಗಳಿಗೆ 2013–14ನೇ ಸಾಲಿನಿಂದ ಜಾರಿಗೆ ಬರುವಂತೆ ಪಠ್ಯಪುಸ್ತಕಗಳನ್ನು ರಚಿಸುವಂತೆ ಅನುಮೋದನೆಯನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಥಮಾ ತರಗತಿಗಳ ಪಠ್ಯಪುಸ್ತಕ ರಚನಾ ಸಮಿತಿಯಿಂದ ರಚಿಸಲ್ಪಟ್ಟ ನೂತನ ಪರಿಷ್ಕೃತ ಪಠ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. ಈ ಪರಿಷ್ಕೃತ ಪಠ್ಯಕ್ರಮದ ವಿಷಯಸೂಚಿಯನ್ನು ಲಗತ್ತಿಸಲಾಗಿದೆ.

ನಿರ್ಣಯ: **ಸಭೆಯು ೨೦೧೩–೧೪ನೇ ಸಾಲಿನಲ್ಲಿ ಸಂಸ್ಕೃತ ಪ್ರಥಮಾ ಮೊದಲನೇ ತರಗತಿಯ ಪಠ್ಯಕ್ರಮವನ್ನು ಅನುಷ್ಠಾನಗೊಳಿಸಲು ಒಪ್ಪಿಗೆಯನ್ನು ನೀಡಿತು. ಈ ಸಂಬಂಧವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಮಂಜೂರಾಗಿರುವ ಅನುದಾನದ ಲೆಕ್ಕಶೀರ್ಷಿಕೆಯಲ್ಲಿ ಪಠ್ಯಪುಸ್ತಕ ಮುದ್ರಣಕ್ಕೆ ಬೇಕಾಗುವ ಮೊತ್ತವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಕೋರಲು ಸಭೆಯು ಸೂಚಿಸಿತು.**

**ವಿಷಯ 12: 2013–14ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಂಸ್ಕೃತ ಕಾವ್ಯ ತರಗತಿಗಳಿಗೆ ನೂತನ ಪರಿಷ್ಕೃತ ಪಠ್ಯಕ್ರಮಗಳ ಅನುಷ್ಠಾನಕ್ಕಾಗಿ ಅನುಮೋದಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ 17.10.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 5ನೆಯ ಸಭೆಯಲ್ಲಿ ಚರ್ಚಿತವಾದ ಸಂಸ್ಕೃತ ಕಾವ್ಯ ತರಗತಿಗಳಿಗೆ 2013–14ನೇ ಸಾಲಿನಿಂದ ಜಾರಿಗೆ ಬರುವಂತೆ ಪಠ್ಯಪುಸ್ತಕಗಳನ್ನು ರಚಿಸುವಂತೆ ಅನುಮೋದನೆಯನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಕಾವ್ಯ ತರಗತಿಗಳ ಪಠ್ಯಪುಸ್ತಕ ರಚನಾ ಸಮಿತಿಯಿಂದ ರಚಿಸಲ್ಪಟ್ಟ ನೂತನ ಪರಿಷ್ಕೃತ ಪಠ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. ಕಾವ್ಯ ತರಗತಿಗಳ ಭಾಷಾ ಪತ್ರಿಕೆಯು ಎಸ್.ಎಸ್.ಎಲ್.ಸಿ. ತರಗತಿಯ ಭಾಷಾ ಪಠ್ಯಕ್ರಮವನ್ನು ಅಳವಡಿಸಿಕೊಂಡಿರುತ್ತದೆ. ಈ ಪತ್ರಿಕೆಗಳನ್ನು ವಿನಾಯಿತಿ ಇಲ್ಲದೇ ಕಡ್ಡಾಯವಾಗಿ ಬರೆಯಬೇಕಾಗುತ್ತದೆ.

ನಿರ್ಣಯ: **ಸಭೆಯು ೨೦೧೩–೧೪ನೇ ಸಾಲಿನಲ್ಲಿ ಸಂಸ್ಕೃತ ಕಾವ್ಯ ಮೊದಲನೇ ತರಗತಿಯ ಪಠ್ಯಕ್ರಮವನ್ನು ಅನುಷ್ಠಾನಗೊಳಿಸಲು ಒಪ್ಪಿಗೆಯನ್ನು ನೀಡಿತು. ಈ ಸಂಬಂಧವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಮಂಜೂರಾಗಿರುವ ಅನುದಾನದ ಲೆಕ್ಕಶೀರ್ಷಿಕೆಯಲ್ಲಿ ಪಠ್ಯಪುಸ್ತಕ ಮುದ್ರಣಕ್ಕೆ ಬೇಕಾಗುವ ಮೊತ್ತವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಕೋರಲು ಸಭೆಯು ಸೂಚಿಸಿತು.**

**ವಿಷಯ 13: 2013–14ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸಂಸ್ಕೃತ ಸಾಹಿತ್ಯ ತರಗತಿಗಳಿಗೆ ನೂತನ ಪರಿಷ್ಕೃತ ಪಠ್ಯಕ್ರಮಗಳ ಅನುಷ್ಠಾನಕ್ಕಾಗಿ ಅನುಮೋದಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ 17.10.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 5ನೆಯ ಸಭೆಯಲ್ಲಿ ಚರ್ಚಿತವಾದ ಸಂಸ್ಕೃತ ಸಾಹಿತ್ಯ ತರಗತಿಗಳಿಗೆ 2013–14ನೇ ಸಾಲಿನಿಂದ ಜಾರಿಗೆ ಬರುವಂತೆ ಪಠ್ಯಪುಸ್ತಕಗಳನ್ನು ರಚಿಸುವಂತೆ ಅನುಮೋದನೆಯನ್ನು

ನೀಡಲಾಗಿದೆ. ಈ ಹಿನ್ನಲೆಯಲ್ಲಿ ಸಾಹಿತ್ಯ ತರಗತಿಗಳ ಪಠ್ಯಪುಸ್ತಕ ರಚನಾ ಸಮಿತಿಯಿಂದ ರಚಿಸಲ್ಪಟ್ಟ ನೂತನ ಪರಿಷ್ಕೃತ ಪಠ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಗಾಗಿ ಸಲ್ಲಿಸಿದೆ. ಸಾಹಿತ್ಯ ತರಗತಿಗಳ ಭಾಷಾ ಪತ್ರಿಕೆಯು ಪಿ.ಯು.ಸಿ. ತರಗತಿಯ ಭಾಷಾ ಪಠ್ಯಕ್ರಮವನ್ನು ಒಳಗೊಂಡಿದ್ದು ಯಾವುದೇ ವಿನಾಯಿತಿಯಿಲ್ಲದೇ ಕಡ್ಡಾಯವಾಗಿ ತೆಗೆದುಕೊಳ್ಳಬೇಕಾಗಿರುತ್ತದೆ.

ನಿರ್ಣಯ: **ಸಭೆಯು ೨೦೧೩–೧೪ನೇ ಸಾಲಿನಲ್ಲಿ ಸಂಸ್ಕೃತ ಸಾಹಿತ್ಯ ಮೊದಲನೇ ವರ್ಷದ ಪಠ್ಯಕ್ರಮವನ್ನು ಅನುಷ್ಠಾನಗೊಳಿಸಲು ಒಪ್ಪಿಗೆಯನ್ನು ನೀಡಿತು. ಈ ಸಂಬಂಧವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಪಠ್ಯಪುಸ್ತಕ ನಿರ್ದೇಶನಾಲಯಕ್ಕೆ ಮಂಜೂರಾಗಿರುವ ಅನುದಾನದ ಲೆಕ್ಕಶೀರ್ಷಿಕೆಯಲ್ಲಿ ಪಠ್ಯಪುಸ್ತಕ ಮುದ್ರಣಕ್ಕೆ ಬೇಕಾಗುವ ಮೊತ್ತವನ್ನು ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಕೋರಲು ಸಭೆಯು ಸೂಚಿಸಿತು.**

**ವಿಷಯ 14: 2013–14ನೇ ಸಾಲಿನಿಂದ ಡಿ.ಲಿಟ್ (ವಿದ್ಯಾವಾಚಸ್ಪತಿ) ಹಾಗೂ ಪಿಎಚ್.ಡಿ. (ವಿದ್ಯಾವಾರಿಧಿ) ಪದವಿಯನ್ನು ಪ್ರಾರಂಭಿಸಲು ಸುತ್ತೋಲೆ ಕಳುಹಿಸಿರುವ ಬಗೆಗೆ.**

ಟಿಪ್ಪಣಿ: 2013–14ನೇ ಸಾಲಿನಿಂದ ಡಿ.ಲಿಟ್ (ವಿದ್ಯಾವಾಚಸ್ಪತಿ) ಹಾಗೂ ಪಿಎಚ್.ಡಿ. (ವಿದ್ಯಾವಾರಿಧಿ) ಪದವಿಯನ್ನು ಪ್ರಾರಂಭಿಸುವುದಕ್ಕೆ ಸುತ್ತೋಲೆ ಕಳುಹಿಸಲಾಗಿದ್ದು, ಸಭೆಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಡಿ.ಲಿಟ್ ಹಾಗೂ ಪಿಎಚ್.ಡಿ. ಪದವಿಗಳನ್ನು ಪ್ರಾರಂಭಿಸಿರುವುದರ ಬಗೆಗೆ ತನ್ನ ಹರ್ಷವನ್ನು ವ್ಯಕ್ತಪಡಿಸಿ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 15: 2013–14ನೇ ಸಾಲಿನಲ್ಲಿ ವಿದ್ವನ್ಮಧ್ಯಮಾ ಹಾಗೂ ವಿದ್ವದುತ್ತಮಾ ತರಗತಿಗಳಿಗೆ 'ಅಧ್ಯಯನ ಮಂಡಳಿ' ರಚಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಗಳು 2 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ತಜ್ಞ ವಿದ್ವಾಂಸರನ್ನು ಒಳಗೊಂಡ ಅಧ್ಯಯನ ಮಂಡಳಿಯನ್ನು ರಚಿಸಬೇಕಾಗಿದೆ. ಈಗ ಜಾರಿಯಲ್ಲಿರುವ ಅನೇಕ ವಿಷಯಗಳನ್ನು ಸಂಕ್ಷಿಪ್ತಗೊಳಿಸಿ ನೇರ ವಿಷಯಗಳನ್ನು ಮಾತ್ರ ಉಳಿಸಿ, ಉಳಿದ ವಿಷಯಗಳನ್ನು ಶಾಲಾಕಲ್ಪನೆಗೆ ತರುವ ದೃಷ್ಟಿಯಿಂದ ಅಧ್ಯಯನ ಮಂಡಳಿಯನ್ನು ರಚಿಸಬಹುದಾಗಿದೆ.

ನಿರ್ಣಯ: **ಸಭೆಯು ಈ ವಿಷಯವಾಗಿ ಸುದೀರ್ಘವಾಗಿ ಚರ್ಚಿಸಿತು. ಈ ಸಂಬಂಧವಾಗಿ ಪ್ರಾಚಾರ್ಯರ ಸಭೆಯನ್ನು ಕರೆದು ಅನುಷ್ಠಾನಗೊಳಿಸಲು ಇರುವ ಸಾಧಕ–ಬಾಧಕಗಳನ್ನು ಚರ್ಚಿಸಲು ಸೂಚಿಸಿತು. ಅನಂತರ ಮಾನ್ಯ ಕುಲಪತಿಗಳ ನಿರ್ದೇಶನದಂತೆ ೨೦೧೩–೧೪ನೇ ಸಾಲಿನ ಅಧ್ಯಯನ ಮಂಡಳಿಯನ್ನು ರಚಿಸಲು ತನ್ನ ಒಪ್ಪಿಗೆಯನ್ನು ನೀಡಿತು.**

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:

**ವಿಷಯ 1: 2012–13ನೇ ಸಾಲಿನ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಗಳ ಫಲಿತಾಂಶ ಪ್ರಕಟಣೆಯ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2012–13ನೇ ಸಾಲಿನಲ್ಲಿ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಗಳನ್ನು ನಡೆಸಿತ್ತು. ಈ ಸಂಬಂಧವಾಗಿ ಮೌಲ್ಯಮಾಪನ ಮುಗಿದು, ಫಲಿತಾಂಶ ಪ್ರಕಟಣೆಗೆ ನಿರ್ದೇಶಕರು ಅಣಿಗೊಳಿಸಿದ್ದಾರೆ. ಫಲಿತಾಂಶದ ವಿವರಗಳು ಈ ಕೆಳಕಂಡಂತಿವೆ:

| ಕ್ರ.ಸಂ. | ವಿವರ | ಪ್ರಥಮಾ | ಕಾವ್ಯ | ಸಾಹಿತ್ಯ |
|---|---|---|---|---|
| 01. | ಪರೀಕ್ಷೆ ತೆಗೆದುಕೊಂಡವರ ಸಂಖ್ಯೆ | 11659 | 5031 | 1398 |
| 02. | ಪ್ರಥಮ ಶ್ರೇಣಿ | 8612 | 4064 | 821 |
| 03. | ದ್ವಿತೀಯ ಶ್ರೇಣಿ | 1400 | 368 | 224 |
| 04. | ಉತ್ತೀರ್ಣ | 699 | 63 | 66 |
| 05. | ಅನುತ್ತೀರ್ಣ | 85 | 94 | 87 |
| 06. | ತಡೆಹಿಡಿಯಲಾದ ಫಲಿತಾಂಶ | – | 29 | 50 |
| 07. | ಗೈರುಹಾಜರಿ | 863 | 413 | 150 |
| 08. | ಶೇಕಡವಾರು ಫಲಿತಾಂಶ | 99.21% | 97.96% | 92.73% |

ನಿರ್ಣಯ: **೨೦೧೨–೧೩ನೇ ಸಾಲಿನ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಗಳ ಉತ್ತಮ ಫಲಿತಾಂಶವನ್ನು ನೀಡಿದ್ದಕ್ಕಾಗಿ ಮಾನ್ಯ ಕುಲಪತಿಗಳು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗೂ ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೂ ಅಭಿನಂದನೆ ತಿಳಿಸಿದರು. ಅನಂತರ ಫಲಿತಾಂಶದ ವಿವರಗಳಿಗೆ ಸಭೆಯು ತನ್ನ ಅನುಮೋದನೆಯನ್ನು ವಿಧ್ಯುಕ್ತವಾಗಿ ನೀಡಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು

...ಟಕ ಸಂಸ್ಕೃತ ವಿಶ್ವವಿದ್ಯಾಲಯ
...ಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
...ಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ೨೭.೦೪.೨೦೧೩ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೭ನೇ ಸಭೆಯ ನಡಾವಳಿ

**ವಿಷಯ 7:** ವಿಶ್ವವಿದ್ಯಾಲಯದ ಅಧೀನವಾಗಿ ಸಂಜೆ ಕಾಲೇಜಿನ ಆರಂಭಕ್ಕೆ ಪ್ರಸ್ತಾವನೆ.

**ಟಿಪ್ಪಣಿ:** ಸಂಸ್ಕೃತವನ್ನು ಭಾಷೆಯನ್ನಾಗಿ ಅಲ್ಲದೇ ಪಾರಂಪರಿಕ ಸಂಸ್ಕೃತ ಶಾಸ್ತ್ರಾಭ್ಯಾಸ ಮಾಡಬಯಸುವ ಜಿಜ್ಞಾಸುಗಳಿಗೆ ಮತ್ತು ಸಂಶೋಧಕರಿಗೆ ಅಧ್ಯಯನ ಅವಕಾಶಗಳನ್ನು ಕಲ್ಪಿಸುವುದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮುಖ್ಯ ಉದ್ದೇಶಗಳಲ್ಲಿ ಒಂದು. ಈಗಾಗಲೇ ಅನುದಾನ ಸಹಿತವಾಗಿ ಸಂಯೋಜನೆಗೊಂಡ ಸಂಸ್ಕೃತ ಕಾಲೇಜುಗಳಲ್ಲದೇ 10 ಹೊಸ ಅನುದಾನರಹಿತ ಕಾಲೇಜುಗಳು ಕಾರ್ಯಾರಂಭ ಮಾಡಿವೆ. ರಾಜ್ಯಾದ್ಯಾಂತ ಸಂಸ್ಕೃತ ಶಾಸ್ತ್ರಾಧ್ಯಯನಕ್ಕಾಗಿ ಹೊಸ ವಾತಾವರಣ ಮೂಡಿಸುವ ಹಿನ್ನೆಲೆಯಲ್ಲಿ ಈ ವಿಸ್ತರಣಾ ಕಾರ್ಯವನ್ನು ಕೈಗೊಳ್ಳಲಾಗಿದೆ. ಪ್ರಸಕ್ತ ಬೆಂಗಳೂರು ಮತ್ತು ಮೈಸೂರು ಈ ಎರಡು ಮಹಾನಗರಗಳಲ್ಲಿ ನಡೆಯುತ್ತಿದ್ದ ಸರಕಾರಿ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ವಿಲೀನಗೊಳಿಸಲಾಗಿದೆ. (ಈ ಕಾಲೇಜುಗಳ ಬೋಧಕ–ಬೋಧಕೇತರ ಸಿಬ್ಬಂದಿಗಳ ಸೇವಾ ವಿಲೀನೀಕರಣಕ್ಕೆ ಸಂಬಂಧಿಸಿದ ವಿಷಯವು ಈಗ ಸರಕಾರದ ಪರಿಶೀಲನೆಯಲ್ಲಿದೆ.) ವಿಶ್ವವಿದ್ಯಾಲಯವು ಸದ್ಯಕ್ಕೆ ಬೆಂಗಳೂರು ನಗರದ ಸಂಸ್ಕೃತ ಕಾಲೇಜಿನ ಆವರಣವನ್ನು ಬಳಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ಐ.ಟಿ.–ಬಿ.ಟಿ. ಹಾಗೂ ಇನ್ನಿತರ ಅನೇಕ ಕ್ಷೇತ್ರಗಳಲ್ಲಿ ಉದ್ಯೋಗ ಮಾಡುತ್ತಿರುವವರಲ್ಲಿ ಸಂಸ್ಕೃತ ಹಾಗೂ ಶಾಸ್ತ್ರಾಧ್ಯಯನದ ಬಗೆಗೆ ಸಾಕಷ್ಟು ಆಸಕ್ತಿ ಇದ್ದು ಅವರಿಗೆ ಅವಕಾಶ ಕಲ್ಪಿಸಿಕೊಡಬೇಕೆಂಬ ಬೇಡಿಕೆಗಳು ವಿಶ್ವವಿದ್ಯಾಲಯದ ಮುಂದೆ ಇವೆ. ಬೆಂಗಳೂರು ನಗರದ ಅನೇಕ ಬಡಾವಣೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಸಂಸ್ಕೃತವನ್ನು ಪಾಠ ಮಾಡುತ್ತಿರುವ ಅನೇಕ ಅಧ್ಯಾಪಕರಿಗೆ ಉನ್ನತ ವಿದ್ಯಾಭ್ಯಾಸದಲ್ಲಿ ಅಭಿಲಾಷೆ ಇದ್ದರೂ ಅವಕಾಶಗಳು ದೊರಕುವುದಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಆಧ್ಯಾಯ2ರ ಪರಿಚ್ಛೇದ4 (4) ಮತ್ತು ಆಧ್ಯಾಯ4ರ ಪರಿಚ್ಛೇದ25(7)ರ ಪ್ರಶಿಕ್ಷಣ ಪರಿಷತ್ತಿಗೆ ದತ್ತವಾದ ಅಧಿಕಾರದ ಅಡಿಯಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಒಂದು ಸಂಧ್ಯಾಕಾಲದ ಸಂಸ್ಕೃತ ಅಧ್ಯಯನ ಕೇಂದ್ರವನ್ನು (ಸಂಸ್ಕೃತ ಕಾಲೇಜು) ಆರಂಭಿಸಬೇಕೆಂಬ ಪ್ರಸ್ತಾವನೆಯನ್ನು ರೂಪಿಸಲಾಗಿದೆ. ಈ ಸಂಜೆ ಕಾಲೇಜು ಸಾಯಂಕಾಲ 4 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಕಾರ್ಯನಿರ್ವಹಿಸಿದಲ್ಲಿ ಉದ್ಯೋಗಿಗಳು, ಮಹಿಳೆಯರು, ಸ್ವಯಂ ಉದ್ಯೋಗಿಗಳು, ನಿವೃತ್ತರು ಈ ಅಧ್ಯಯನ ಕೇಂದ್ರದ ಲಾಭವನ್ನು ಪಡೆಯುತ್ತಾರೆ. ಈಗಿರುವ ಸಂಸ್ಕೃತ ಕಾಲೇಜಿನಲ್ಲಿಯೇ ಸಂಜೆ ಕಾಲೇಜನ್ನು ನಡೆಸಲು ಸ್ಥಳಾವಕಾಶ ಮಾಡಿಕೊಳ್ಳಬಹುದಾಗಿದೆ ಹಾಗೂ ವಿ.ವಿ. ಮತ್ತು ಕಾಲೇಜಿನಲ್ಲಿರುವ ಅಧ್ಯಾಪಕರ ಸೇವೆಯನ್ನು ಪಡೆದು ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ವಿಶ್ವವಿದ್ಯಾಲಯದ ಸಂಜೆ ಕಾಲೇಜನ್ನು ನಡೆಸಬಹುದಾಗಿದೆ.

**ನಿರ್ಣಯ:** ಸಂಸ್ಕೃತ ಸಂಜೆ ಕಾಲೇಜನ್ನು ಪ್ರಾರಂಭಿಸುವ ಬಗೆಗೆ ಸಭೆಯು ಸುದೀರ್ಘವಾಗಿ ಚರ್ಚಿಸಿತು. ಭಾರತದಾದ್ಯಂತ ಎಲ್ಲೂ ಸಂಸ್ಕೃತ ಸಂಜೆ ಕಾಲೇಜು ಇಲ್ಲದಿರುವುದನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಆದರೆ, ಈ ಸಂಬಂಧವಾಗಿ ಸಾರ್ವಜನಿಕರಿಂದ ಬೇಡಿಕೆ ಇರುವುದನ್ನು ಗಮನಿಸಿ, ಉತ್ತಮ ರೀತಿಯಲ್ಲಿ ೨೦೧೩–೧೪ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಬಹುದೆಂದೂ ಈ ವಿಷಯವಾಗಿ ಪ್ರಶಾಸನ ಸಮಿತಿಯ ಸಭೆಯಲ್ಲಿಟ್ಟು ಚರ್ಚಿಸಿ ವಿಷಯವನ್ನು ಅಂತಿಮಗೊಳಿಸಬಹುದೆಂದೂ ಸಭೆಯು ಸೂಚಿಸಿತು.

ಕುಲಸಚಿವರು